ಅಧ್ಯಕ್ಷರು: ಹಾಗೆಲ್ಲ ಹೇಳುವುದಕ್ಕೆ ಆಗುತ್ತದೆಯೇ? ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರೆ ತಾವು ಮಾತನಾಡಿ.

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

1) **ವಿಷಯ:** ದಿನಭತ್ಯೆ ಹಾಗೂ ಮನೆಬಾಡಿಗೆ ಭತ್ಯೆಯಲ್ಲಿ ತಾರತಮ್ಯವಾಗಿರುವ ಬಗ್ಗೆ.

=====

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಡುವಂತಹದ್ದು ಮುಖ್ಯವಾಗಿ 23,000 ಜನ ದಿನಗೂಲಿ ನೌಕರರು 2012ರಲ್ಲಿ ನಾನು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಾನು ಬೆಳಗಾಂ ಅಧಿವೇಶನದಲ್ಲಿ ಅದನ್ನು ಮಂಡನೆ ಮಾಡಿ ಆ ಬಗ್ಗೆ ಬಿಲ್ಲು ಕೂಡ ಪಾಸಾಯಿತು. ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012 ಒಂದು ಬಿಲ್ಲು ಪಾಸಾಗಿದೆ. ಅವರುಗಳಿಗೆ ಏನು facility ಕೊಡಬೇಕಾಗಿತ್ತು, ಇವತ್ತಿನ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2014ರಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸಿತು. ಇದು ಬಂದಂತಹ ಸಂದರ್ಭದಲ್ಲಿ ಅವರುಗಳಿಗೆ ಸಂಬಂಧಪಟ್ಟಂತೆ ಎರಡು ವಿಚಾರಗಳ ಬಗ್ಗೆ ತುಟಿಭತ್ಯೆಯ ಬಗ್ಗೆ ಇದೆಯಲ್ಲಾ ಈ ಬಗ್ಗೆ ನಮ್ಮ ಒಂದು ಬಿಲ್ಲಿನಲ್ಲಿ 100% ಇತ್ತು. ಉಳಿದ ನೌಕರರುಗಳಿಗೆ ಯಾವ ರೀತಿ ಇದೆ ಆ ಪ್ರಕಾರ ಆಗಿತ್ತು.

ಅಧ್ಯಕ್ಷರು: ಈಗ ಅವರು ಸದನದ ಗಮನವನ್ನು ಸೆಳೆಯಲಿ.

ಶ್ರೀ ಜಗದೀಶ್ ಶೆಟ್ಟರ್: ನಾನು ಎರಡು ಪಾಯಿಂಟ್‌ಗಳ ಬಗ್ಗೆ ಕೇಳುತ್ತಿದ್ದೇನೆ. ನಾವು ಏನು ದಿನಗೂಲಿ ನೌಕರರಿಗೆ ಸಂಬಂಧಪಟ್ಟಂತೆ ಬಿಲ್ಲು ಅನ್ನು ಏನು ತಂದಿದ್ದೇವೆ. ಅದನ್ನು ಯಥಾವತ್ತಾಗಿ ಅನುಷ್ಠಾನ ಮಾಡಿರುವುದಿಲ್ಲ. ಈ ತುಟಿಭತ್ಯೆಯ ವಿಷಯಕ್ಕೆ ಸಂಬಂಧಪಟ್ಟಂತೆ ಕೇವಲ 75% ಮಾಡಿದ್ದಾರೆ. ಅದನ್ನು ಬೇರೆ ಯಾವ ನೌಕರರಿಗೆ ಕೊಡುತ್ತಾರೆಯೇ ಅದನ್ನು ಕೊಡಬೇಕೆಂದು

ಮೂಲಬಿಲ್ಲಿನಲ್ಲಿತ್ತು. ಅದನ್ನು ಈ ಸರ್ಕಾರ 75% ಎಂದು ಮಾಡಿದ್ದಾರೆ. ಈ ರೀತಿಯಾಗಿ ಮಾಡಿರುವುದು ಸರಿಯಲ್ಲ. ಇನ್ನೊಂದು ಕಾಲಕಾಲಕ್ಕೆ ನೀಡಲಾಗುವ ಕರ್ತವ್ಯನಿರ್ವಹಿಸುವ ಸ್ಥಳಕ್ಕೆ ಅನ್ವಯವಾಗುವಂತೆ ಮನೆಬಾಡಿಗೆ ಭತ್ಯೆಯ ಸಾಮಾನ್ಯ ದರ ಶೇ.75ರಷ್ಟು ಎಂದು ಮಾಡಿದ್ದಾರೆ. ಉಳಿದ ಎಲ್ಲಾ ನೌಕರುಗಳಿಗೆ 100% ಎಂದು ಇದೆ. ಇಲ್ಲಿ ನಮ್ಮ ಉದ್ದೇಶ ಏನಿತ್ತು ಎಂದರೆ, ಉಳಿದ ಸರ್ಕಾರಿ ನೌಕರರುಗಳಿಗೆ. ಏನು facilities ಬೇಕು ಎಲ್ಲಾ ಸೌಲಭ್ಯಗಳು ಸಿಗಬೇಕೆನ್ನುವಂತಹ ಉದ್ದೇಶ ಇತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಆ ಒಂದು ಅನುಕೂಲತೆ 75% ಎಂದು ಮಾಡಿದ್ದಾರೆ. ಈ ರೀತಿಯಾಗಿ ಮಾಡಿರುವುದು ತಪ್ಪು. ಮೊದಲು ಮೂಲ ಬಿಲ್ಲಿನಲ್ಲಿ ಏನಿತ್ತು ಅದೇ ರೀತಿಯಾಗಿ ಅದು ಅನುಷ್ಠಾನವಾಗಬೇಕೆಂದು ನಮ್ಮ ಒತ್ತಾಯವಾಗಿದೆ.

ಅಧ್ಯಕ್ಷರು: ಆಯಿತು. ಮಾನ್ಯ ಸಚಿವರೆ ತಾವು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿರುವಂತಹ ಪ್ರಶ್ನೆಗೆ ಈಗಾಗಲೇ ನಾವು ನಿಯಮಾವಳಿಗಳ ಪ್ರಕಾರವಾಗಿ ನಾವು notification ಅನ್ನು ಮಾಡಿದ್ದೇವೆ. ನಮ್ಮ Actಗೂ ಮತ್ತು Notificationಗೂ ವ್ಯತ್ಯಾಸ ಇರುವುದಕ್ಕೆ ಸಾಧ್ಯವಿಲ್ಲ. ಈಗ ಅವೆಲ್ಲವನ್ನು ಪರಿಗಣಿಸಿ ಇವತ್ತು ತೀರ್ಮಾನ ಮಾಡಿರುತ್ತಾರೆ. ತಾವು ದಿನಭತ್ಯೆ ಹಾಗೂ ಮನೆಬಾಡಿಗೆ ಭತ್ಯೆಯಲ್ಲಿ ತಾರತಮ್ಯವಾಗಿ ಎಂದು ಹೇಳುತ್ತಿದ್ದೀರಿ, ಆ ಬಗ್ಗೆ ನಾನು ಸಮಗ್ರವಾಗಿ ಪರಿಶೀಲನೆಯನ್ನು ಮಾಡಿ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: O.K. ಶ್ರೀ ಹೆಚ್.ಎಸ್ ಪ್ರಕಾಶ್‌ರವರೆ ತಾವು ಕೇಳಿ.

2) ವಿಷಯ: ಪೊಲೀಸ್ ಇಲಾಖೆಯವರು ಕ್ರಮ ತೆಗೆದುಕೊಳ್ಳದಿರುವ ಬಗ್ಗೆ.

===